# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 130 |
| ಸದಸ್ಯರ ಹೆಸರು | : | ಶ್ರೀ ಸುನಿಲ್ ವಲ್ಯಾಪೂರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 05.03.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಇ-ಪೌತಿ ಖಾತೆ/ವರಸ ಆಂದೋಲನ ಎಂದರೇನು; ಇದರ ಮಾನದಂಡನೆಗಳು ಏನು; | ಕೃಷಿ ಜಮೀನಿನ ಮಾಲೀಕರು ಮರಣ ಹೊಂದಿದ ನಂತರ ಮಾಲೀಕತ್ವವನ್ನು ಮೃತರ ಉತ್ತರಾಧಿಕಾರಿಗಳ ಹೆಸರಿಗೆ ಬದಲಾವಣೆ ಮಾಡಲು ಪೌತಿ/ವಾರಸ ಖಾತೆ ಆಂದೋಲನ ನಡೆಸಲಾಗುತ್ತಿದೆ.<br><br>ಪೌತಿ/ವಾರಸ ಖಾತೆ ಆಂದೋಲನಾ ನಡೆಸುವ ಕುರಿತಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 33 ಟಿಆರ್‌ಎಂ 2019, ದಿನಾಂಕ:17.10.2020 ಮತ್ತು ತಿದ್ದುಪಡಿ ಸುತ್ತೋಲೆ ದಿನಾಂಕ:10.01.2024ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಸುತ್ತೊಲೆಗಳ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಮರಣ ಹೊಂದಿದವರ ವಾರಸುದಾರರ ಹೆಸರಿಗೆ ಖಾತಾ ಪಹಣಿ ಇಂಡೀಕರಣ ಮಾಡುವ ನಿಟ್ಟಿನಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಇ-ಪೌತಿ ಆಂದೋಲನವನ್ನು ಪ್ರಾಯೋಗಿಕವಾಗಿ ಧಾರವಾಡ, ಗದಗ, ವಿಜಯನಗರ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ದಿನಾಂಕ:17.12.2024ರಿಂದ ಪ್ರಾರಂಭಿಸಲಾಗಿದೆ.<br><br>ಸದರಿ ಪ್ರಕ್ರಿಯೆಯಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಿಗೆ Mobile Application ನೀಡಲಾಗಿದ್ದು, ಸದರಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಯು ಮರಣ ಹೊಂದಿದವರ ವಾರಸುದಾರರ e-KYC ಪಡೆಯುವ ಮುಖಾಂತರ ವಂಶವೃಕ್ಷ ಹಾಗೂ ಮರಣ ಪ್ರಮಾಣ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಪಡೆದು ಪೌತಿ ಖಾತೆ ಮಾಡಲು ತಾಂತ್ರಿಕ ಕ್ರಮವಹಿಸಲಾಗುತ್ತಿದೆ. |
| (ಆ) | ಮೂಲಭೂತ ಸೌಕರ್ಯವಾದ ಮೊಬೈಲ್‌ಗಳು ಪಿಡಿಓಗಳಿಗೆ ನೀಡುತ್ತಿದ್ದು, ಅದೇ ರೀತಿ ಗ್ರಾಮ ಲೆಕ್ಕಾಧಿಕಾರಿಗಳಿಗೆ ನೀಡದಿರಲು ಕಾರಣವೇನು; ಮುಂದಿನ ದಿನಗಳಲ್ಲಿ ನೀಡುವ ಯೋಜನೆ ಇದೆಯೇ; | ಕೇಂದ್ರ ಸರ್ಕಾರದ DILRMP ಯೋಜನೆಯಡಿ ದಿನಾಂಕ:05.03.2024ರ ಆದೇಶದನ್ವಯ ಆಧಾರ್ ಸೀಡಿಂಗ್ ಕಾರ್ಯಕ್ಕಾಗಿ Laptop ಒದಗಿಸಲು ಆಯ್ದ 10 ಜಿಲ್ಲೆಗಳಿಗೆ ತಲಾ ರೂ.5.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ. |
| (ಇ) | ಇವರುಗಳಿಗೆ ಹೆಚ್ಚಿನ ಕಂಪ್ಯೂಟರ್ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ | ಡಿ.ಜಿ. ಕಂದಾಯ ಯೋಜನೆಯಡಿ ದಿನಾಂಕ:18.02.2025ರ ಖರೀದಿ ಆದೇಶದನ್ವಯ |

| | | |
|---|---|---|
| | ಬಂದಿದೆಯೇ; ಗ್ರಾಮ ಆಡಳಿತ ಕಚೇರಿಗಳಿಗೆ ಎಷ್ಟು ಕಂಪ್ಯೂಟರ್ ಅಳವಡಿಸಲಾಗಿದೆ; | ಒಟ್ಟು 4000 CHROME BOOK Laptop ಗಳನ್ನು ಖರೀದಿ ಮಾಡಲು ಆದೇಶ ನೀಡಲಾಗಿದ್ದು, ಸದರಿ Laptopಗಳನ್ನು ಗ್ರಾಮ ಆಡಳಿತ ಅಧಿಕಾರಿಗಳಿಗೆ ವಿತರಣೆ ಮಾಡಲು ತೀರ್ಮಾನಿಸಲಾಗಿದೆ. |
| (ಈ) | ಗ್ರಾಮಲೆಕ್ಕಾಧಿಕಾರಿಗಳ ವೃತ್ತವನ್ನು ಬಹಳ ಹಿಂದಿನ ಜನಸಂಖ್ಯೆ ಆಧಾರದ ಮೇಲೆ ಮಾಡಿದ್ದು, ಸದರಿ ಜನಸಂಖ್ಯೆ ಆಧಾರದ ಮೇಲೆ ಮತ್ತೆ ವೃತ್ತವನ್ನು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲದಿದ್ದಲ್ಲಿ, ವೃತ್ತದಲ್ಲಿ ಗ್ರಾಮಲೆಕ್ಕಾಧಿಕಾರಿಗಳನ್ನು ಭೇಟಿ ಮಾಡುವುದು ಹೇಗೆ; (ಸಂಪೂರ್ಣ ಮಾಹಿತಿ ನೀಡುವುದು) | ಗ್ರಾಮ ಆಡಳಿತ ಅಧಿಕಾರಿಗಳ ವೃತ್ತವನ್ನು ಬಹಳ ಹಿಂದಿನ ಜನಸಂಖ್ಯೆ ಆಧಾರದ ಮೇಲೆ ಮಾಡಿದ್ದು, ಸದರಿ ಜನಸಂಖ್ಯೆ ಆಧಾರದ ಮೇಲೆ ಮತ್ತೆ ವೃತ್ತವನ್ನು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.<br>ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಕಡ್ಡಾಯವಾಗಿ ಆಯಾ ಕಂದಾಯ ವೃತ್ತ / ಕೇಂದ್ರ ಸ್ಥಾನಗಳಲ್ಲಿಯೇ ಇದ್ದುಕೊಂಡು ಸಾರ್ವಜನಿಕರ ಕೆಲಸ-ಕಾರ್ಯಗಳನ್ನು ನಿರ್ವಹಿಸತಕ್ಕದ್ದೆಂದು, ಒಂದು ವೇಳೆ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಆಯಾ ಕಂದಾಯ ವೃತ್ತ / ಕೇಂದ್ರ ಸ್ಥಾನದಲ್ಲಿ ಕಛೇರಿಯ ವೇಳೆಯಲ್ಲಿ ಲಭ್ಯವಾಗದೇ ಕೆಲಸ-ಕಾರ್ಯಗಳಿಗೆ ತೊಂದರೆಯಾಗಿದ್ದಲ್ಲಿ, ಅಂತಹವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 03 ಬಿಎಸ್‌ಸಿ 2009, ದಿನಾಂಕ:15.01.2009, ಕಂಇ 97 ಬಿಎಸ್‌ಸಿ 2016, ದಿನಾಂಕ:25.05.2016, ಕಂಇ 97 ಬಿಎಸ್‌ಸಿ 2016, ದಿನಾಂಕ:14.09.2016, ಕಂಇ 175 ಬಿಎಸ್‌ಸಿ 2017, ದಿನಾಂಕ:07.09.2022 ಮತ್ತು ಕಂಇ 175 ಬಿಎಸ್‌ಸಿ 2017, ದಿನಾಂಕ:20.11.2024ಗಳಲ್ಲಿ ಸೂಚನೆ ನೀಡಲಾಗಿರುತ್ತದೆ. |
| (ಉ) | ವಂಶವೃಕ್ಷ, ಜಾತಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಒಟ್ಟು ಎಷ್ಟು ಎಫ್.ಐ.ಆರ್. ಗಳಾಗಿವೇ; (ಜಿಲ್ಲಾವಾರು ಮಾಹಿತಿ ನೀಡುವುದು) | ವಂಶವೃಕ್ಷ, ಜಾತಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |
| (ಊ) | ವಂಶವೃಕ್ಷ ಮತ್ತು ಜಾತಿ ಪ್ರಮಾಣ ಪತ್ರ ಇತರೆ ಪ್ರಮಾಣ ಪತ್ರ ತಪ್ಪು ದಾಖಲಾತಿ ನೀಡಿ ಪಡೆದುಕೊಂಡಲ್ಲಿ ನೇರ ಹೊಣೆ ಯಾರು; ಅಧಿಕಾರಿಗಳು ತಪ್ಪು ದಾಖಲಾತಿ ನೀಡಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ 1990ರ ಕಲಂ 5-ಬಿ ರಡಿಯಲ್ಲಿ ತಹಶೀಲ್ದಾರರು ಉದ್ದೇಶಪೂರ್ವಕವಾಗಿ ಸುಳ್ಳು ಜಾತಿ ಪ್ರಮಾಣಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣಪತ್ರವನ್ನು ನೀಡಿದ್ದರೆ ಅಪರಾಧ ನಿರ್ಣಯವಾದ ತರುವಾಯ ಆತನು 6 ತಿಂಗಳಿಗೆ ಕಡಿಮೆಯಿಲ್ಲದ ಆದರೆ 2 ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಎಂದಿರುತ್ತದೆ.<br>ಆದರೆ ಕಲಂ 11 ರಂತೆ ಈ ಅಧಿನಿಯಮದ |

| | | |
|---|---|---|
| | | ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡು ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ವಿಷಯಕ್ಕೆ ಆಗಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ಅಭಿಯೋಜನೆ ಅಥವಾ ಇತರೆ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ ಎಂದು ಕಾಯ್ದೆಯಲ್ಲಿನ ಉಲ್ಲೇಖದಂತೆ ಹಾಗೂ ಸುತ್ತೋಲೆ ಸಂಖ್ಯೆ: ಎಸ್‌ಡಬ್ಲ್ಯೂಡಿ 105 ಎಸ್‌ಎಡಿ 2013, ದಿನಾಂಕ:04.05.2013 ರಂತೆ ಕ್ರಮ ವಹಿಸಬಹುದಾಗಿರುತ್ತದೆ. |
| (ಋ) | ದಪ್ತರ್ ಹಾಗೂ ಜಮಾಬಂದಿಯನ್ನು ರದ್ದುಪಡಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ? | ದಪ್ತರ್ ಹಾಗೂ ಜಮಾಬಂದಿಯನ್ನು ರದ್ದುಪಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

**ಸಂ: ಕಂಇ 76 ಟಿಆರ್‌ಎಂ 2025 (1696653)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು